ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತ ಚಿಕಿತ್ಸೆ ಹೊಂದಲು ಅನುಕೂಲ ಮಾಡಿ ಕೊಡುವುದು

೧೬೫೫. ಶ್ರೀ ಬಿ. ಜಿ. ಕೊಟ್ರಪ್ಪ (ಹರಿಹರ).— ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಹೊರ ಹಾಗೂ ಒಳರೋಗಿಗಳಿಗೆ ಸಂಬಂಧಿಸಿದಂತೆ ಉಚಿತ ಚಿಕಿತ್ಸೆ ನೀಡಲು ಸರ್ಕಾರದವರು ಕ್ರಮ ಕೈಗೊಳ್ಳುವರೇ ?

ಆ) ಸ್ವಾತಂತ್ರ್ಯ ಹೋರಾಟಗಾರರಿಗೆ ಉಚಿತಚಿಕಿತ್ಸೆ ಹೊಂದಲು ಇರುವಉತ್ಪನ್ನದ ಮಿತಿಯನ್ನು ತೆಗೆದುಹಾಕಿ ಹೊರ ಮಂತ್ರು ಒಳರೋಗಿಗಳಿಗೆ ಉಚಿತ ಚಿಕಿತ್ಸೆ ಪಡೆಯುವಂತೆ ಹುಕುಂ ಮಾಡುವಿರಾ ?

ಶ್ರೀ ಎಚ್. ಎಲ್. ತಿಮ್ಮೇಗೌಡ (ಆರೋಗ್ಯ ಮಂತ್ರಿಗಳು).—

ಅ) ತಿಂಗಳಿಗೆ ೩೦೦ ರೂಪಾಯಿಗಳ ವರಮಾನ ಮಿಕ್ಕದವರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ.

ಆ) ಸದ್ಯಕ್ಕೆ ಈ ರೀತಿಯ ಕಾರ್ಯನೀತಿ ಇಲ್ಲ ಈ ಸಲಹೆಯನ್ನು ಸೂಕ್ತವಾಗಿ ಪರಿಗಣಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯ ಸರ್ಕಲ್ ಇನ್‌ಸ್ಪೆಕ್ಟರ್‌ರವರ ವ್ಯಾಪ್ತಿಯಲ್ಲಿ ಬರುವ ಆರಕ್ಷಕ ಠಾಣೆ

೧೨೭೩. ಶ್ರೀ ಬಸವರಾಜ್ (ಬ್ರಹ್ಮಾವರ).— ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರ ಸರ್ಕಲ್ ಇನ್ಸ್‌ಪೆಕ್ಟರ್‌ರವರ ವ್ಯಾಪ್ತಿಯಲ್ಲಿರುವ ಆರಕ್ಷಕ ಠಾಣೆಗಳೆಷ್ಟು ? ಔಟ್ ಪೋಸ್ಟ್‌ಗಳೆಷ್ಟು ? ಹಾಗೂ ಅವುಗಳು ಎಲ್ಲೆಲ್ಲಿವೆ ?

ಆ) ಆ ಠಾಣೆಗಳಲ್ಲಿರುವ ಠಾಣೆವಾರು ಆರಕ್ಷಕರ ಸಂಖ್ಯೆ ಎಷ್ಟು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—

ಅ) ಕುಂದಾಪುರ ಸರ್ಕಲ್ ಇನ್ಸ್‌ಪೆಕ್ಟರ್‌ರವರ ವ್ಯಾಪ್ತಿಗೆ ಈ ಕೆಳಕಂಡ ಆರಕ್ಷಕ ಠಾಣೆಗಳು ಬರುತ್ತವೆ. ಔಟ್ ಪೋಸ್ಟ್‌ಗಳು ಯಾವುವೂ ಇಲ್ಲ.

೧ ಕುಂದಾಪುರ
೨ ಬೈಂದೂರು
೩ ಬ್ರಹ್ಮಾವರ
೪ ಕೋಟ
೫ ಕೊಲ್ಲೂರು

ಆ) ಮಂಜೂರಾತಿಯಾದ ಆರಕ್ಷಕ ಬಲ ಈ ಕೆಳಕಂಡಂತಿದೆ.

ಆರಕ್ಷಕ ಠಾಣೆಗಳು	ಆರಕ್ಷಕ ಉಪ ನಿರೀಕ್ಷಕರು	ಸಹಾಯಕ ಉಪ ನಿರೀಕ್ಷಕರು	ಮುಖ್ಯ ಪೇದೆಗಳು	ಆರಕ್ಷಕ ಪೇದೆಗಳು
೧ ಕುಂದಾಪುರ	೧	ಇಲ್ಲ	೪	೨೨
೨ ಬೈಂದೂರು	೧	,,	೩	೯
೩ ಬ್ರಹ್ಮಾವರ	೧	,,	೩	೯
೪ ಕೋಟ	೧	,	೩	೮
೫ ಕೊಲ್ಲೂರು	೧	೧	೩	೧೫
ಒಟ್ಟು.	೫	೧	೧೬	೬೩